**ಆಧುನಿಕ ಜಗತ್ತಿನ ಜಾನಪದವಾಗಿರುವ ಸಿನಿಮಾ ಹಲಬಗೆಯಲ್ಲಿ ನೋಡುಗರನ್ನು ಕಾಡುತ್ತ, ಪರವಶಗೊಳಿಸುತ್ತ ಬಂದಿದೆ. ವಿಶಿಷ್ಟ ಸಿನಿಮಾಗಳ ಮಾಂತ್ರಿಕತೆಯನ್ನು ಚಿತ್ರರಸಿಕರಿಗೆ ಇಲ್ಲಿ ಪರಿಚಯಿಸಲಾಗುತ್ತದೆ. ತಮ್ಮ ಚಿತ್ತದ ಬೆಳ್ಳಿತೆರೆಯಲ್ಲಿ ದಾಖಲಾದ, ಮನಸ್ಸನ್ನು ಸೂರೆಗೊಂಡ ಅನನ್ಯ ಸಿನಿಮಾ ಒಂದರ ಚಿತ್ರಕ ಬರವಣಿಗೆ ಇಲ್ಲಿದೆ**

ಎಣಿಸಬಹುದೇ ಎಂದಾದರೂ
ಗದ್ದೆಯಲ್ಲಿ ತೊನೆದಾಡುವ ಭತ್ತದ ತೆನೆಗಳೆಷ್ಟು?
ಹರಿವ ನದಿಗಿರುವ ತಿರುವುಗಳೆಷ್ಟು?
ಓಡುವ ಮೋಡದ ಪದರಗಳೆಷ್ಟು?

ಗುಡಿಸಬಹುದೇ ಯಾರಾದರೂ
ಕಗ್ಗಾಡಿನಲ್ಲಿ ಉದುರಿದ ತರಗೆಲೆಗಳ?
ಮತ್ತೆ ನೀಡಬಹುದೇ ಅಣತಿಯ ಗಾಳಿಗೆ
ಮತ್ತೆಂದೂ ಅಲ್ಲಾಡಿಸದಿರುವಂತೆ ಮರಗಿಡಗಳ

ಎಷ್ಟೊಂದು ಚಿಗುರೆಲೆಗಳ ತಿಂದಿರಬೇಕು ರೇಶ್ಮೆಹುಳ
ಒಂದು ಚಿತ್ತಾರದ ಬಟ್ಟೆಗೆ ನೂಲ ಹುಟ್ಟಿಸಲು
ಇನ್ನೆಷ್ಟು ಸುರಿಯಬೇಕು ಮಳೆ ಆಗಸದಿಂದ
ಶರಧಿಯ ಕಣ್ಣೀರಿಂದ ತುಳುಕಿಸಲು
ಮತ್ತೆಷ್ಟು ವರ್ಷ ಕಾಯಬೇಕು ಶಶಿ
ಅವನಿಗಾಗಲು ವೃದ್ಧಾಪ್ಯದ ಕಸಿ

ನಡುರಾತ್ರಿ ಬಂದು ಸನಿಹದಲ್ಲಿಯೇ ನಿಂದು
ಕಾಯುವನು ನನ್ನೆದೆಯ ಕದಿವ ಚಂದ್ರಮ
ಅವನಿಗಾಗಿ ಅನುದಿನ ಹಾಡುತ್ತಲಿರುವುದೇ
ನನ್ನ ಪಾಲಿಗೆ ಎಂದೆಂದೂ ತೀರದ ಸಂಭ್ರಮ

ಇದು ವಿಯೆಟ್ನಾಂ ಭಾಷೆಯ 'ಥ್ರೀ ಸೀಸನ್ಸ್' ಸಿನಿಮಾದಲ್ಲಿನ ಒಂದು ಜನಪದ ಹಾಡು. ಕುಷ್ಠರೋಗದಿಂದ ನರಳುತ್ತಾ ಮೆಲ್ಲಮೆಲ್ಲನೇ ಅಪ್ಪಿಕೊಳ್ಳುತ್ತಿರುವ ಸಾವನ್ನು ಒಪ್ಪಿಕೊಳ್ಳುತ್ತಿರುವ ಕವಿಯೊಬ್ಬನ ಎದುರು ಹೂ ಮಾರುವ ಹುಡುಗಿಯೊಬ್ಬಳು ಹೇಳುವ ಹಾಡು.